■ ವಿಶಾಖ ಎನ್.

# ಪ್ರಿಯಾಂಕಾ ಕೊರಳಲ್ಲಿ ಕೋಟಿ ಹಾರ



ಕಪ್ಪು ಗೌನು; ತೊಡೆಗಳವರೆಗೆ ಹದವಾಗಿ ಕತ್ತರಿಸಿ ಮಾಡಿದಂತಹ ವಿನ್ಯಾಸ. ಮುಖದ ಮೇಲೆ ಮಿರಿಮಿರಿ ನಗು. ಕೊರಳಲ್ಲಿ 11.6 ಕ್ಯಾರೆಟ್‌ಗಳ ಬಲ್ಗರಿ ಲಗುನಾ ವಜ್ರದ ಕಂಠೀಹಾರ. ಪ್ರಿಯಾಂಕಾ ಚೋಪ್ರಾ ಈ ಒಡವೆ ಬ್ರ್ಯಾಂಡ್‌ನ ರಾಯಭಾರಿಯಷ್ಟೆ. ಹಾರವನ್ನು ವಿದೇಶಿ ವನಿತೆಯೊಬ್ಬರು ತೊಡಿಸುವಾಗ ಕನ್ನಡಿ ಎದುರು ನಿಂತಾಗ ನಟೀಮಣಿಯ ಮುಖ ಮೊರದಗಲ. ಅತ್ಯಪರೂಪದ ನೀಲಿ ಬಣ್ಣದ ವಜ್ರದ ಪೆಂಡೆಂಟಿನ ಕಂಠೀಹಾರವನ್ನು ಸೂಕ್ಷ್ಮವಾಗಿ ಗಮನಿಸಲೇ ನಿಮಿಷಗಳು ಬೇಕಾದೀತು. ಇದಕ್ಕಿಂತ ಮುಖ್ಯ ಸುದ್ದಿ: ಈ ಕಂಠೀಹಾರದ ಬೆಲೆ ಅಂದಾಜು ₹204.5 ಕೋಟಿ.

ಒಡವೆಗಳನ್ನು ಹೀಗೆ ಮಾರುಕಟ್ಟೆಗೆ ಪರಿಚಯಿಸುವ ಮುನ್ನ ನಡೆದ ‘ಎಂಇಟಿ ಗಾಲಾ ಔಟಿಂಗ್’ನಲ್ಲಿ ಪ್ರಿಯಾಂಕಾ ಜತೆಗೆ ಅವರ ಪತಿ ನಿಕ್ ಜೊನಾಸ್ ಕೂಡ ಇದ್ದರು. ಪತ್ನಿ ಕಪ್ಪು ಗೌನ್ ತೊಟ್ಟಿದ್ದರೆ, ಪತಿ ಬಿಳಿ ಉಡುಪಿನಲ್ಲಿ ಕಂಗೊಳಿಸುತ್ತಿದ್ದರು. ಬಲ್ಗರಿ ಲಗುನಾ ವಜ್ರದ ಅತ್ಯಪರೂಪದ ಈ ಕಂಠೀಹಾರವನ್ನು ಹರಾಜು ಹಾಕಲಾಗುತ್ತದೆ. ಅದಕ್ಕೆ ಮೊದಲು ಅದರ ಮೂಲ ಬೆಲೆಯನ್ನು ಅನಾವರಣಗೊಳಿಸಿದ್ದು, ಪ್ರಿಯಾಂಕಾ ಅವರಿಗೆ ಅದನ್ನು ತೊಡಿಸುವ ಮೂಲಕ. ಮಿರಿಮಿರಿ ಮಿಂಚುತ್ತಿದ್ದ ವಜ್ರದೊಡವೆಯನ್ನು ಕನ್ನಡಿಯಲ್ಲಿ ಕಂಡೊಡನೆ ಪ್ರಿಯಾಂಕಾ ಬಿಟ್ಟ ಬಾಯಿಯನ್ನು ಬಿಟ್ಟಹಾಗೆಯೇ ಕೆಲವು ನಿಮಿಷ ಇದ್ದದ್ದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಇಂಟರ್‌ನ್ಯಾಷನಲ್ ಜೆಮೊಲಾಜಿಕಲ್ ಇನ್‌ಸ್ಟಿಟ್ಯೂಟ್ ಪ್ರಕಾರ, ಲಗುನಾ ಒಡವೆ ಸರಣಿಗಳಲ್ಲೇ ಅತಿ ದೊಡ್ಡ ನೀಲಿ ಹರಳನ್ನು ಉಳ್ಳ ಏಕೈಕ ಕಂಠೀಹಾರವಿದು. ಕಂಪನಿಯು ಇದುವರೆಗೆ ಮಾರಾಟ ಮಾಡಿರುವ ಎಲ್ಲ ಒಡವೆಗಳಿಗಿಂತ ಅತಿ ದುಬಾರಿ. ‘ಸೌತ್ ಬೈಸ್ ಲಕ್ಷುರಿ ವೀಕ್’ನಲ್ಲಿ ಮೇ 12ರಂದು ಒಡವೆಯ ಹರಾಜು ನಡೆಯಲಿದೆ.

ತಾವು ಕಂಠೀಹಾರ ತೊಟ್ಟ ಫೋಟೊಗಳಷ್ಟೆ ಅಲ್ಲದೆ, ಕೇವಲ ಕಂಠೀಹಾರದ ಹಲವು ಫೋಟೊಗಳನ್ನು ಪ್ರಿಯಾಂಕಾ ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ■



## ಮುಂದಿನ ತಿಂಗಳು ತೆರೆಗೆ ‘ಮಾಮಣ್ಣನ್’

ಸಶಕ್ತ ರೂಪಕಗಳ ಮೂಲಕವೇ ಗಹನವಾದದ್ದನ್ನು ಚಿತ್ರಕಥೆಯಾಗಿಸುವ ಮಾರಿ ಸೆಲ್ವರಾಜ್ ನಿರ್ದೇಶನದ ‘ಮಾಮಣ್ಣನ್’ ತಮಿಳು ಸಿನಿಮಾದ ಪೋಸ್ಟರ್‌ಗಳು ಇತ್ತೀಚೆಗೆ ಬಿಡುಗಡೆಯಾದವು. ಐಷಾರಾಮಿ ಆಸನದ ಒಂದು ತುದಿಯಲ್ಲಿ ಉದಯನಿಧಿ ಸ್ಟಾಲಿನ್ ಲಾಂಗ್ ಹಿಡಿದು ಕೂತಿದ್ದರೆ, ಅವರ ಪಕ್ಕದಲ್ಲಿ ವಡಿವೇಲು ಕೈಯಲ್ಲಿ ಗನ್. ಅವರು ತೊಟ್ಟ ಬಿಳಿ ಅಂಗಿಯ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳು—ಇದು ಒಂದು ಪೋಸ್ಟರ್. ಇನ್ನೊಂದರಲ್ಲಿ, ಈ ಇಬ್ಬರಲ್ಲದೆ ಫಹಾದ್ ಫಾಸಿಲ್ ಕೂಡ ಇದ್ದಾರೆ. ಅವರ ಹಣೆಮೇಲೆ ತಮಿಳು ಶೈಲಿಯ ವಿಭೂತಿ ಹಾಗೂ ಕುಂಕುಮವಿದ್ದು, ರಾಜಾ ಮೀಸೆಯೂ ಉಂಟು.

ಎ.ಆರ್. ರೆಹಮಾನ್ ಸ್ವರ ಸಂಯೋಜನೆ, ತೇಣಿ ಈಶ್ವರ್ ಛಾಯಾಚಿತ್ರಗ್ರಹಣವಿರುವ ‘ಮಾಮಣ್ಣನ್’ ಸಿನಿಮಾದಲ್ಲಿ ಕೀರ್ತಿ ಸುರೇಶ್ ಕೂಡ ಕೇಂದ್ರ ಪಾತ್ರವೊಂದರಲ್ಲಿ ಅಭಿನಯಿಸಿದ್ದಾರೆ. ಇದುವರೆಗೆ ಹಾಸ್ಯಪಾತ್ರಗಳಲ್ಲೇ ನಟಿಸಿರುವ ವಡಿವೇಲು ಈ ಸಿನಿಮಾದಲ್ಲಿ ಗಂಭೀರ ಪಾತ್ರದಲ್ಲಿ ಕಾಣಿಸಿಕೊಂಡಿರುವ ಸಾಧ್ಯತೆಯನ್ನು ಪೋಸ್ಟರ್ ಹೇಳುತ್ತಿದೆ. ಚಿತ್ರಕಥೆಯು ಏನನ್ನು ಕುರಿತದ್ದು ಎನ್ನುವ ಸಂಗತಿಯನ್ನು ಮಾತ್ರ ಮಾರಿ ಸೆಲ್ವರಾಜ್ ಇದುವರೆಗೆ ಗುಟ್ಟಾಗಿಯೇ ಇಟ್ಟಿದ್ದಾರೆ. ಜೂನ್‌ನಲ್ಲಿ ಈ ಸಿನಿಮಾ ತೆರೆಕಾಣಲಿದೆ. ಎಂ. ಶೆಂಗಬಾಗ್ ಮೂರ್ತಿ ಹಾಗೂ ಆರ್. ಅರ್ಜುನ್ ದುರೈ ಈ ಸಿನಿಮಾ ನಿರ್ಮಾಪಕರು.

ಉದಯನಿಧಿ ಸ್ಟಾಲಿನ್ ಕಳೆದ ವರ್ಷ ಡಿಸೆಂಬರ್‌ನಲ್ಲಿ ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ‘ಮಾಮಣ್ಣನ್’ ತಮ್ಮ ಕೊನೆಯ ಚಿತ್ರ ಎಂದು ಆಗ ಅವರು ಸ್ಪಷ್ಟಪಡಿಸಿದ್ದರು. ಮಾರಿ ಸೆಲ್ವರಾಜ್ ‘ವಾಳೈ’ ಎಂಬ ಇನ್ನೊಂದು ಸಿನಿಮಾವನ್ನೂ ಖುದ್ದು ನಿರ್ಮಿಸುತ್ತಿದ್ದಾರೆ. ಅಲ್ಲದೆ ಅದನ್ನೂ ಅವರೇ ನಿರ್ದೇಶಿಸಿದ್ದಾರೆ. ನಿಖಿಲಾ ವಿಮಲ್, ಪ್ರಿಯಾಂಕಾ ನಾಯರ್, ಕಲೈಅರಸನ್, ದಿವ್ಯಾ ದುರೈಸ್ವಾಮಿ ಈ ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ■